# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 06.10.2011**

ಮೆಟ್ರೊ ಸ್ಟೇಷನ್‌ಗಳಿಗೆ ಸಂಪರ್ಕ ಕಲ್ಪಿಸುವ ಪಾದಚಾರಿ ಮಾರ್ಗಗಳು ಮತ್ತು ರಸ್ತೆಗಳನ್ನು ಅಭಿವೃದ್ಧಿಪಡಿಸಲು ಮತ್ತು ಈ ರಸ್ತೆಗಳಲ್ಲಿ ನಿರಂತರ ಸ್ವಚ್ಛತೆ ಕಾರ್ಯ ಕೈಗೊಳ್ಳುವಂತೆ ಪೂರ್ವ ವಲಯದ ಅಭಿಯಂತರುಗಳಿಗೆ ಮತ್ತು ಆರೋಗ್ಯ ಅಧಿಕಾರಿಗಳಿಗೆ ಪಾಲಿಕೆ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ಆದೇಶ ನೀಡಿದ್ದಾರೆ.

ಇದೇ ತಿಂಗಳ ದಿನಾಂಕ 20 ರಂದು ಮಹಾತ್ಮಾಗಾಂಧಿ ರಸ್ತೆಯಿಂದ ಬೈಯಪ್ಪನಹಳ್ಳಿ ವರೆಗೆ ಮೆಟ್ರೊ ಸೇವೆ ಪ್ರಾರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಪಾಲಿಕೆ ಆಯುಕ್ತರು ದಿನಾಂಕ: 04.10.2011 ರಂದು ರಾತ್ರಿ 10.00 ಗಂಟೆಗೆ ಅರಮನೆ ರಸ್ತೆ, ರೇಸ್‌ಕೋರ್ಸ್ ರಸ್ತೆ, ಬಸವೇಶ್ವರ ವೃತ್ತ, ರಾಜಭವನರಸ್ತೆ, ಕಬ್ಬನ್‌ರಸ್ತೆ, ಸ್ಯಾಂಕಿ ರಸ್ತೆ, ಮಹಾತ್ಮಗಾಂಧಿ ರಸ್ತೆಯಿಂದ ಬೈಯಪ್ಪನಹಳ್ಳಿ ವರೆಗೆ ಮತ್ತು ಸಿ.ಎಂ.ಹೆಚ್. ರಸ್ತೆ ಮುಂತಾದ ಕಡೆ ತಪಾಸಣೆ ಕೈಗೊಂಡು ಪಾದಚಾರಿ ಮಾರ್ಗ ಮತ್ತು ರಸ್ತೆಗಳ ಸ್ಥಿತಿಗತಿಗಳನ್ನು ಪರಿಶೀಲಿಸಿದರು.

ಪಾಲಿಕೆಯಿಂದ ಈಗಾಗಲೇ ರಸ್ತೆಗುಂಡಿಗಳನ್ನು ಮುಚ್ಚುವ ಕಾಮಗಾರಿ ಕೈಗೊಂಡಿದ್ದರೂ ಕೂಡಾ ನಿರಂತರ ವಾಹನ ಸಂಚಾರದಿಂದ ಹೊಸದಾಗಿ ರಸ್ತೆಗುಂಡಿಗಳು ನಿರ್ಮಾಣಗೊಳ್ಳುವುದು ಮತ್ತು ಸೇವಾ ಸಂಸ್ಥೆಗಳು ಅಗೆಯುವುದರಿಂದ ಪಾದಚಾರಿ ಮಾರ್ಗದ ಚಪ್ಪಡಿ ಕಲ್ಲುಗಳು ಆಗಾಗ್ಗೆ ಅಸ್ತವ್ಯಸ್ತವಾಗುತ್ತಿರುತ್ತವೆ. ಸಂಬಂಧಪಟ್ಟ ಅಭಿಯಂತರುಗಳು ಇಂತಹವುಗಳನ್ನು ಪದೇ ಪದೇ ಗಮನಿಸಿ ಅವುಗಳ ದುರಸ್ಥಿಗೆ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿ, ಕರ್ನಾಟಕ ಲೋಕಸೇವಾ ಆಯೋಗದ ಎದುರುಗಡೆ ರಸ್ತೆಯಲ್ಲಿ ಮತ್ತು ಬಸವೇಶ್ವರ ವೃತ್ತದಲ್ಲಿ ರಸ್ತೆಗುಂಡಿಗಳು ಇರುವುದನ್ನು ಗಮನಿಸಿದ ಆಯುಕ್ತರು ಶಿವಾಜಿನಗರ ಕಾರ್ಯಪಾಲಕ ಅಭಿಯಂತರಿಗೆ ತರಾಟೆಗೆ ತೆಗೆದುಕೊಂಡರು. ವಾಹನ ಸಂಚಾರಕ್ಕೆ ಅನಾನುಕೂಲವಾಗುವಂತಹ ಸ್ಥಳದಲ್ಲಿ ಆಯುಕ್ತರು ಸ್ವಲ್ಪ ಹೊತ್ತಿನವರೆಗೆ ನಿಂತು ವಾಹನ ಚಾಲಕರಿಗೆ ಆಗುತ್ತಿರುವ ತೊಂದರೆಯನ್ನು ಕಾರ್ಯಪಾಲಕ ಅಭಿಯಂತರಿಗೆ ಮನವರಿಕೆ ಮಾಡಿಕೊಟ್ಟರು. ರಸ್ತೆ ದುರಸ್ಥಿ ಕಾರ್ಯ ಒಂದು ವಾರದೊಳಗೆ ಪೂರ್ಣಗೊಳಿಸಲು ಗಡುವು ನೀಡಿದರು. ಇಲ್ಲದಿದ್ದಲ್ಲಿ ಶಿಸ್ತಿನ ಕ್ರಮ ಜರುಗಿಸಿ ಬೇರೆಡೆಗೆ ವರ್ಗಾವಣೆ ಮಾಡುವುದಾಗಿ ಕೂಡಾ ತಿಳಿಸಿದರು.

ಬಸವೇಶ್ವರ ವೃತ್ತ, ಮಹಾತ್ಮಗಾಂಧಿ ವೃತ್ತ, ಅನಿಲ್‌ಕುಂಬಳೆ ವೃತ್ತ, ಎಂ.ಜಿ. ರಸ್ತೆಯ ಬಿ ಸ್ಟೇಷನ್ ವೃತ್ತ, ಟ್ರೀನಿಟಿ ವೃತ್ತ, ಮುಂತಾದ ಪ್ರಮುಖ ವೃತ್ತಗಳಲ್ಲಿ ಹೂಗಿಡಗಳನ್ನು ನೆಟ್ಟಿ ಹಸಿರು ಹೆಚ್ಚಿಸಿ ಸುಂದರವಾಗಿ ಕಾಣುವಂತೆ ಮಾಡಲು ತೋಟಗಾರಿಕೆ ಅಧೀಕ್ಷರಿಗೆ ಸೂಚನೆ ನೀಡಿದರು.

ಮೆಟ್ರೊ ನಿರ್ಮಾಣ ಕಾಮಗಾರಿಯಿಂದ ಅನಿಲ್ ಕುಂಬಳೆ ವೃತ್ತದಿಂದ ಟ್ರೀನಿಟಿ ವೃತ್ತದವರೆಗೆ ಮತ್ತು ಸಿ.ಎಂ.ಹೆಚ್. ರಸ್ತೆ ಉದ್ದಕ್ಕೂ ಜಲ್ಲಿಕಲ್ಲು, ಮಣ್ಣು ಮತ್ತು ಇತರೆ ತ್ಯಾಜ್ಯಗಳು ರಸ್ತೆ ಮೇಲೆ ಬಿದ್ದಿರುವುದರಿಂದ ವಾಹನ ಸಂಚಾರಕ್ಕೆ ಮತ್ತು ಪಾದಚಾರಿಗಳ ಓಡಾಟಕ್ಕೆ ತೊಂದರೆಯಾಗುತ್ತಿರುವುದರಿಂದ ಪಾಲಿಕೆ ಪೂರ್ವ ವಲಯದಲ್ಲಿ ಲಭ್ಯವಿರುವ ತುರ್ತುಪಡೆಯ ಸಿಬ್ಬಂದಿ, 10 ಟ್ರಾಕ್ಟರ್, 5 ಟಿಪ್ಪರ್ ಮತ್ತು 100 ಜನ ಗ್ಯಾಂಗ್‌ಮೆನ್‌ಗಳನ್ನು ಉಪಯೋಗಿಸಿಕೊಂಡು ತೀವ್ರ ಸ್ವಚ್ಛತೆ ಕಾರ್ಯ ಕೈಗೊಂಡು ರಸ್ತೆಗಳನ್ನು ಅಚ್ಚುಕಟ್ಟಾಗಿ ಕಾಣುವಂತೆ ಮಾಡಲಾಯಿತು. ಈ ರಸ್ತೆಗಳಲ್ಲಿ ಸ್ವಚ್ಛತೆ ಕಾರ್ಯ ನಿರಂತರವಾಗಿ ಹಮ್ಮಿಕೊಂಡು 17.10.2011ರ ಮುಂಚಿತವಾಗಿ ಪೂರ್ಣಗೊಳಿಸಲಾಗುವುದೆಂದು ಪಾಲಿಕೆ ಆಯುಕ್ತರು ತಿಳಿಸಿದರು.

ತಪಾಸಣೆ ಸಂದರ್ಭದಲ್ಲಿ ಪೂರ್ವ ವಲಯದ ಜಂಟಿ ಆಯುಕ್ತರು, ಮುಖ್ಯ ಅಭಿಯಂತರರು ಮತ್ತು ಪ್ರಧಾನ ಅಭಿಯಂತರರು ಮತ್ತು ಅಧಿಕಾರಿಗಳು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**